ಕರ್ನಾಟಕದಲ್ಲಿರುವ ರೌಡಿ ಪಟ್ಟಿಯಲ್ಲಿರುವ ವ್ಯಕ್ತಿಗಳ ಸಂಖ್ಯೆ

೪೫೩. (೮೯೧) ಶ್ರೀ ಎ.ಕೆ. ಆರಂತಕೃಷ್ಣ (ಶಿವಾಜಿನಗರ).—ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕರ್ನಾಟಕದಲ್ಲಿನ ರೌಡಿ ಪಟ್ಟಿಯಲ್ಲಿರುವ ವ್ಯಕ್ತಿಗಳ ಸಂಖ್ಯೆ ಎಷ್ಟು, ದಿನಾಂಕ ೩೧.೧೨.೧೯೯೩ಕ್ಕೆ ವಿಶೇಷವಾಗಿ ಬೆಂಗಳೂರು ನಗರಕ್ಕೆ ಸಂಬಂಧಿಸಿದಂತೆ, ಹಾಗೂ ಎಷ್ಟು ಕಾಲಾವಧಿ ಮತ್ತು ವರ್ಗೀಕರಣ ಇವರಲ್ಲಿ ಹೊರರಾಜ್ಯದಿಂದ ಬಂದಿರುವ ಸಂಖ್ಯೆ ಎಷ್ಟು ?

ಆ) ಸಾರ್ವಜನಿಕರಲ್ಲಿ ಶಾಂತಿ ಮತ್ತು ಸೌಹಾರ್ದತೆಯನ್ನು ಕಾಪಾಡಲು ಇವರ ವಿರುದ್ಧ ಸರ್ಕಾರ ತೆಗೆದುಕೊಂಡಿರುವ ಶಿಸ್ತು ಕಾನೂನು ಮತ್ತು ಸಾಧಾರಣ ಕ್ರಮಗಳೇನು ?

ಇ) ಇಂತಹ ರೌಡಿಗಳ ಸಂಖ್ಯೆಯನ್ನು ಕಡಿಮೆ ಮಾಡಲು ಹಾಗೂ ಇವರುಗಳ ಕಪಿಮುಷ್ಠಿಯಿಂದ ಅಪಾಯಕರನ್ನು ದೂರವಿಡಲು ಸರ್ಕಾರ ರೂಪಿಸಿರುವ ನೀತಿಗಳಾವುವು ?

ಈ) ಬೆಂಗಳೂರಿಗೆ ಸಂಬಂಧಿಸಿದಂತೆ ಇವರುಗಳ ವರ್ಗವಾರು ವಿವರಣೆ, ರಾಜಕಾರಣಿ, ನಗರಸಭಾ ಸದಸ್ಯರುಗಳು, ಮತ್ತು ಆಯಕ್ಕೆ ಬಾದ ಪ್ರತಿನಿಧಿಗಳು, ಸರ್ಕಾರಿ ಮತ್ತು ಅರೆ ಸರ್ಕಾರಿ ನೌಕರರುಗಳು ಸೇರಿದಂತೆ.

ಉ) ಇಂತಹ ಸಮಾಜಘಾತಕ ಚಟುವಟಿಕೆಗಳನ್ನು ಹತ್ತಿಕ್ಕಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯಮಂತ್ರಿಗಳು).—

ಅ) ಕರ್ನಾಟಕದಲ್ಲಿ ೮,೪೦೪ ಜನರ ರೌಡಿ ಪಟ್ಟಿಯಲ್ಲಿ ಇದ್ದಾರೆ. ಬೆಂಗಳೂರು ನಗರದಲ್ಲಿ ೧,೨೬೦ ಮತ್ತು ಗ್ರಾಮಾಂತರದಲ್ಲಿ ೨೬೬ ಜನರನ್ನು ರೌಡಿ ಪಟ್ಟಿಯಲ್ಲಿ ಸೇರಿಸಲಾಗಿದೆ. ಬೆಂಗಳೂರು ನಗರದ ರೌಡಿಗಳ ವರ್ಗೀಕರಣ ಈ ಕೆಳಕಂಡಂತಿದೆ: —

ಎ—೬೪೫, ಬಿ—೩೧೧, ಸಿ—೩೧೪ ಮತ್ತು ಬೆಂಗಳೂರು ಗ್ರಾಮಾಂತರ ಪ್ರದೇಶದಲ್ಲಿ ೧೨೫ ರೌಡಿಗಳನ್ನು "ಎ" ಎಂದು ವರ್ಗೀಕರಿಸಿ ಉಳಿದವರನ್ನು ಬಿ ಮತ್ತು ಸಿ ಎಂದು ವರ್ಗೀಕರಿಸಲಾಗಿದೆ. ಇವರಲ್ಲಿ ಒಬ್ಬರು ಹೊರರಾಜ್ಯದವರಾಗಿದ್ದಾರೆ.

ಆ) ಶಾಂತಿ ಮತ್ತು ಸುವ್ಯವಸ್ಥೆಗೆ ಭಂಗ ಬಾರದಂತೆ ಇವರ ಚಟುವಟಿಕೆಗಳನ್ನು ನಿಯಂತ್ರಿಸಲು ಪೋಲೀಸ್ ಸಿಬ್ಬಂದಿ ಇವರ ಮೇಲೆ ಕಟ್ಟುನಿಟ್ಟಾದ ನಿಗಾ ವಹಿಸಿ, ಕೆಲಸ ನಿರ್ವಹಿಸುತ್ತಿದೆ. ಇವರು ದುಷ್ಕೃತ್ಯ ಎಸಗಿದಾಗ ಇವರ ವಿರುದ್ಧ ನಿರ್ದಿಷ್ಟ ಅಪರಾಧವನ್ನನುಸರಿಸಿ ಕ್ರಮ ಕೈಗೊಳ್ಳಲಾಗುತ್ತಿದೆ. ಹವ್ಯಾಸಿ ರೌಡಿಗಳನ್ನು ಹತ್ತಿಕ್ಕಲು ರೌಡಿ ನಿಯಂತ್ರಣ ಕಾಯ್ದೆ ಹಾಗೂ ಟಾಡಾ ಕಾಯಿದೆಗಳನ್ನು ಉಪಯೋಗಿಸಲಾಗುತ್ತದೆ,

ಇ) ಅಪಾಯಕ ಜನರನ್ನು ಈ ರೌಡಿಗಳ ಕಪಿಮುಷ್ಠಿಯಿಂದ ತಪ್ಪಿಸಲು ಕಾನೂನನ್ವಯ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ.

ಈ) ರಾಜ್ಯದ ವಿವಿಧ ಪೋಲೀಸ್ ಠಾಣೆಗಳಲ್ಲಿ ಳಳಿ ಜನ ಸದಸ್ಯರುಗಳ ಹೆಸರುಗಳನ್ನು ರೌಡಿ ಪಟ್ಟಿಯಲ್ಲಿ ಅವರುಗಳ ಹಿಂದಿನ ಚಟುವಟಿಕೆಗಳ ಪ್ರತಿಕೂಲಲಕ್ಷಣಗಳ ಆಧಾರದ ಮೇಲೆ ಸೇರಿಸಲಾಗಿದೆ. ಇವರುಗಳಲ್ಲಿ ಬೆಂಗಳೂರು ನಗರಕ್ಕೆ ಸೇರಿದವರು ಯಾರು ಇಲ್ಲ.

ವಿವರಗಳು :

ಮುನ್ಸಿಪಲ್ ಕೌನ್ಸಿಲರ್ಸ್	—೨೭
ರಾಜಕಾರಣಿಗಳು	—೧೦
ತಾಲೂಕು ಕೌನ್ಸಿಲರ್‌ಗಳು	—೦೩
ಗ್ರಾಮಪಂಚಾಯಿತಿ ಸದಸ್ಯರುಗಳು	—೦೩
ಮಾಜಿ ಉಪಮೇಯರ್	—೦೧

ಉ) ನಿರ್ದಿಷ್ಟ ಅಪರಾಧಿಗಳಲ್ಲಿ ತೊಡಗಿದವರನ್ನು ಜಾರಿಯಲ್ಲಿರುವ ಕಾನೂನಿನ ರೀತ್ಯಾ ಕಠಿಣ ಕ್ರಮ ತೆಗೆದುಕೊಳ್ಳಲಾಗುತ್ತದೆ, ಹಾಗೂ ಕಟ್ಟುನಿಟ್ಟಾದ ನಿಗಾ ವಹಿಸಲಾಗಿದೆ.